ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/16/ಇಎಸ್‌ಟಿ(3)/2025

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 21.08.2025

## ಪ್ರಕಟಣೆ-3

ವಿಷಯ: 2025-26ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಈ ಕಚೇರಿ ಅಧಿಸೂಚನೆ ಸಂ: DTE-ADMIOEST(3)/1/2024, ದಿ:30.09.2024 ಹಾಗೂ 09.11.2024
2. ಈ ಕಚೇರಿ ಪ್ರಕಟಣೆ-2 ದಿ: 25.07.2025

* * * * * * *

2025-26ನೇ ಶೈಕ್ಷಣಿಕ ಸಾಲಿನಲ್ಲಿ ಇಲಾಖಾ ವ್ಯಾಪ್ತಿಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಉಲ್ಲೇಖ(2) ರ ಈ ಕಛೇರಿ ಪ್ರಕಟಣೆಗೆ-2ಕ್ಕೆ ಈ ಕೆಳಕಂಡ ಅಂಶಗಳನ್ನು ಸೇರ್ಪಡೆ ಮಾಡಲಾಗಿರುತ್ತದೆ.

2024-25ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ ಕಾಲೇಜು, ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳು ಈ ಕೆಳಕಂಡ ಅಂಶಗಳನ್ನು ಪೂರೈಸಿ, ಇಚ್ಛಿಸಿದ್ದಲ್ಲಿ ಮಾತ್ರ 2025-26ನೇ ಸಾಲಿಗೆ ಮುಂದುವರೆಯಲು ಅವಕಾಶ ಕಲ್ಪಿಸಲಾಗುತ್ತದೆ.

1. ಉಲ್ಲೇಖ(1)ರ ಅಧಿಸೂಚನೆಯನ್ವಯ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಮೊದಲನೇ(Retain & Allotment) ಹಾಗೂ ಎರಡನೇ ಸುತ್ತಿನ (Allotment) ಆನ್ ಲೈನ್ ಕೌನ್ಸಲಿಂಗ್ ಮೂಲಕ ಆಯ್ಕೆಯಾಗಿರಬೇಕು.
2. 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಆಯ್ಕೆಯಾದ ಸಂಸ್ಥೆಯಲ್ಲಿ ಶೈಕ್ಷಣಿಕ ವರ್ಷದ/ಸೆಮಿಸ್ಟರ್‌ನ ಅಂತ್ಯದವರೆಗೂ ಕಾರ್ಯನಿರ್ವಹಿಸಬೇಕಾಗಿರುತ್ತದೆ.
3. ಸಂಸ್ಥೆಯಲ್ಲಿ ಪೂರ್ಣಕಾಲಿಕ ಬೋಧಕ ಸಿಬ್ಬಂದಿಯವರಿಗೆ ನಿಗಧಿತ ಕಾರ್ಯಭಾರ ಹಂಚಿಕೆಯಾದ ನಂತರ ಹೆಚ್ಚುವರಿ ಕಾರ್ಯಭಾರ ಲಭ್ಯವಿದ್ದಲ್ಲಿ ಮಾತ್ರ .
4. 2025-26 ನೇ ಶೈಕ್ಷಣಿಕ ಸಾಲಿಗೆ ಮೇಲಿನ ಮೂರು ಅಂಶಗಳನ್ನು ಪೂರೈಸಿ ಮುಂದುವರೆಯಲು ಇಚ್ಛಿಸುವ ಅತಿಥಿ ಉಪನ್ಯಾಸಕರಿಂದ ಅಭಿಮತ ಪತ್ರವನ್ನು ಪಡೆಯುವುದು.
5. 2025-26 ನೇ ಸಾಲಿನಲ್ಲಿ ಮುಂದುವರೆಸುವ ಅತಿಥಿ ಉಪನ್ಯಾಸಕರುಗಳ ಮಾಹಿತಿಗಳನ್ನು 2024-25ನೇ ಸಾಲಿನಲ್ಲಿ ಪ್ರಚುರ ಪಡಿಸಿರುವ ಸದರಿ ಅತಿಥಿ ಉಪನ್ಯಾಸಕರುಗಳ ಪಟ್ಟಿಗಳಲ್ಲಿರುವ ಕ್ರಮ ಸಂಖ್ಯೆಗಳೊಂದಿಗೆ ತಂತ್ರಾಂಶದಲ್ಲಿ (software) ಕಡ್ಡಾಯವಾಗಿ ನಮೂದಿಸುವುದು.

2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಪ್ರಕ್ರಿಯೆ ವೇಳಾಪಟ್ಟಿ_ಈ ಕೆಳಕಂಡತಿರುತ್ತದೆ.

**ಆಯ್ಕೆ ಪ್ರಕ್ರಿಯೆ ವೇಳಾಪಟ್ಟಿ:**

| ಕ್ರ. ಸಂ. | ವಿವರ | ದಿನಾಂಕ |
|---|---|---|
| 1. | ಆನ್‌ಲೈನ್ ಮೂಲಕ ಮುಂದುವರೆಸಿರುವ (retain) ಅತಿಥಿ ಉಪನ್ಯಾಸಕರ ಪಟ್ಟಿಯನ್ನು ಪರಿಷ್ಕರಣೆ ಮಾಡಲು ಅಂತಿಮ ದಿನಾಂಕ: (ಪ್ರಾಂಶುಪಾಲರ ಮುಖಾಂತರ) | 22.08.2025 ಹಾಗೂ 23.08.2025 |
| 2. | ತಾತ್ಕಾಲಿಕ ಮುಂದುವರೆಸಿರುವ (retain) ಅತಿಥಿ ಉಪನ್ಯಾಸಕರ ಪಟ್ಟಿಯನ್ನು ಹಾಗೂ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: | 25.08.2025 |
| 3. | 2025-26ನೇ ಸಾಲಿಗೆ ಮುಂದುವರೆಸಿರುವ (retain) ಅತಿಥಿ ಉಪನ್ಯಾಸಕರ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: | 26.08.2025 |
| 4. | ತಾತ್ಕಾಲಿಕ ಅರ್ಹತಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಪರಿಷ್ಕರಿಸಲು ಅವಕಾಶ ನೀಡುವ ದಿನಾಂಕ: | 28.08.2025 |
| 5. | ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: | 30.08.2025 |
| 6. | ಅಂತಿಮ ಅರ್ಹತಾ ಪಟ್ಟಿಯನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಸ್ಥಳ ಆಯ್ಕೆ ಮಾಡಲು ಕೌನ್ಸಿಲಿಂಗ್ ನಡೆಸುವ ಸಮಯ ಮತ್ತು ದಿನಾಂಕ: | 01.09.2025<br>10.00 ರಿಂದ 1.30 ರವರೆಗೆ |
| 7. | ಅಂತಿಮ ಅರ್ಹತಾ ಪಟ್ಟಿಯನ್ವಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಸ್ಥಳ ಆಯ್ಕೆ ಮಾಡಲು ಕೌನ್ಸಿಲಿಂಗ್ ನಡೆಸುವ ಸಮಯ ಮತ್ತು ದಿನಾಂಕ: | 01.09.2025<br>2.30 ರಿಂದ 5.30 ರವರೆಗೆ<br>02.09.2025<br>10.00 ರಿಂದ 5.30 ರವರೆಗೆ |
| 8. | ಕೌನ್ಸಿಲಿಂಗ್‌ನಲ್ಲಿ ಸಂಸ್ಥೆಯನ್ನು ಆಯ್ಕೆಗೊಂಡ ಅತಿಥಿ ಉಪನ್ಯಾಸಕರುಗಳನ್ನು ಪಟ್ಟಿಯನ್ನು ಪ್ರಕಟಿಸುವ ದಿನಾಂಕ | 02.09.2025 |

Manjunath

ಆಯುಕ್ತರು
ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ,**

1) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಯ, ಬೆಂಗಳೂರು.
2) ಜಂಟಿ ನಿರ್ದೇಶಕರು, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆಯ, ಬೆಂಗಳೂರು.
3) ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ.
4) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ತಾ.ಶಿ.ಇ ಕಛೇರಿ, ಬೆಂ. – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

**ಪ್ರತಿಯನ್ನು,**

1) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂ. - ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಕಛೇರಿ ಪ್ರತಿ.